1	2	3	4
15	ನವಲೂರು ಗ್ರಾಮದಲ್ಲಿ ಮಹಿಳಾ ಸಮುದಾಯ ಭವನ ನಿರ್ಮಾಣ	2.00	
16	ನವಲೂರು ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ	3.00	2.55
17	ಮುಕ್ತಿ ಕೇಂದ್ರ ನವನಗರ	1.00	0.89
18	ಪೋಶ್ಶೀಸಗಲ್ಲಿಯ ಸಮುದಾಯ ಭವನ	1.80	0.07
19	ಪುರೋಹಿತ ನಗರದಲ್ಲಿ ಸಮುದಾಯ ಭವನ ನಿರ್ಮಾಣ (ಸ.ವಿ.ನಿ)	2.00	0.46
20	ಸತ್ತೂರ ಗುಡಿಯ ಹತ್ತಿರ ಸಮುದಾಯ ಭವನ ನಿರ್ಮಾಣ	2.00	---
21	ಸತ್ತೂರ ಆಶ್ರಯ ಮನೆಗಳ ಹತ್ತಿರ ಸಮುದಾಯ ಭವನ ನಿರ್ಮಾಣ	1.00	0.97
22	ತಡಸಿನ ಕೊಪ್ಪದ ಗರಡಿ ಮನೆ	1.00	0.29
23	ವಿದ್ಯಾಗಿರಿಯಲ್ಲಿ ಧರ್ಮಛತ್ರ ಸಂಗೀತ ಶಾಲೆ ನಿರ್ಮಾಣ	2.65	---
	ಒಟ್ಟು	40.671	10.748
	ಒಟ್ಟು (30 ಕಾಮಗಾರಿಗಳು)	55.971	15.514

ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ

4296(5001) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ ಕಟ್ಟಲು ಮಂಜೂರಾದ ಅಂದಾಜು ಮೊತ್ತವೆಷ್ಟು ;

ಆ) ಈ ಅಂದಾಜು ಎಷ್ಟು ಅಂತಸ್ತು ಕಟ್ಟಲು ಮಂಜೂರಾಗಿತ್ತು ;

ಇ) ಈವರೆವಿಗೂ ಎಷ್ಟು ಅಂತಸ್ತುಗಳ ಕಟ್ಟಡ ಕಟ್ಟಲಾಗಿದೆ ;

ಈ) ಈವರೆವಿಗೂ ಖರ್ಚಾಗಿರುವ ಹಣವೆಷ್ಟು ;

ಉ) ಈ ಕಟ್ಟಡ ಅಂದಾಜಿನ ಪ್ರಕಾರ ಪೂರ್ಣಗೊಳಿಸಲು ಇನ್ನೂ ಎಷ್ಟು ಹಣದ ಅವಶ್ಯಕತೆ ಇದೆ :

ಊ) ಈ ಕಟ್ಟಡ ಪೂರ್ಣಗೊಳ್ಳಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರೂ. 195.00 ಲಕ್ಷಗಳು.

ಆ) ನೆಲಮಹಡಿ, ಮೊದಲ ಮಹಡಿ, ಎರಡನೆಯ ಹಾಗೂ ಮೂರನೇ ಮಹಡಿಯ ನಿರ್ಮಾಣವು ಒಳಗೊಂಡಂತೆ ಅಂದಾಜು ಮಂಜೂರಾಗಿತ್ತು.

ಇ) ಈವರೆವಿಗೂ ಕಟ್ಟಡದ ನೆಲ ಮಹಡಿ ಹಾಗೂ ಮೊದಲ ಮಹಡಿ ಕಾಮಗಾರಿಗಳು ಪೂರ್ಣಗೊಂಡಿದೆ. ಎರಡನೇ ಮಹಡಿ ನಿರ್ಮಾಣ ಕಾಮಗಾರಿಯ ಮುಕ್ತಾಯದ ಹಂತದಲ್ಲಿದೆ.

ಈ) ಜೂನ್ 2003 ರ ಅಂತ್ಯಕ್ಕೆ ರೂ. 176.077 ಲಕ್ಷಗಳು ವೆಚ್ಚವಾಗಿರುತ್ತದೆ.

ಉ) ಅಂದಾಜಿನ ಪ್ರಕಾರ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಇನ್ನು ರೂ. 125.00 ಲಕ್ಷಗಳು ಅಗತ್ಯವಿರುತ್ತದೆ.

ಊ) ಎರಡನೇ ಮಹಡಿ ನಿರ್ಮಾಣ ಕಾಮಗಾರಿಯನ್ನು ಆಗಸ್ಟ್ 2003 ಕ್ಕೆ ಪೂರ್ಣಗೊಳಿ – ಸಲಾಗುವುದು. ಇನ್ನುಳಿದ ಈ ಕಟ್ಟಡದ ಮೂರನೇ ಮಹಡಿಯ ಕಾಮಗಾರಿಯನ್ನು ಅನುದಾನದ ಲಭ್ಯತೆಯನ್ನಾಧರಿಸಿ ಪೂರ್ಣಗೊಳಿಸಲಾಗುವುದು.

ಬೆಂಗಳೂರು – ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ

4298(5003) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು – ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ನಂ. 206 ರ ಕಾಮಗಾರಿಯ ಕೆಲಸವು ಎಷ್ಟು ಕಿಮೀ ವರೆಗೆ ನಡೆದಿರುತ್ತವೆ ;

ಆ) ಇನ್ನು ಎಷ್ಟು ಕಿಮೀ ಕೆಲಸ ಆಗಬೇಕಾಗಿದೆ ;

ಇ) ಈ ಕಾಮಗಾರಿ ಪೂರ್ಣಗೊಳ್ಳಲು ಇನ್ನು ಎಷ್ಟು ಕಾಲಾವಕಾಶ ಬೇಕು ; ವಿವರ ಒದಗಿಸುವುದು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ತುಮಕೂರು – ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ನಂ. 206 ರಲ್ಲಿ ತುಮಕೂರಿನಿಂದ – ಶಿವಮೊಗ್ಗ ಜಿಲ್ಲೆಯ ಗಡಿಯವರೆಗೆ 299.60 ಕಿಮೀ ಉದ್ದವಿದ್ದು, ಇದರಲ್ಲಿ 224.00 ಕಿಮೀ ನಷ್ಟು ಕಾಮಗಾರಿ ಪೂರ್ಣಗೊಂಡಿದ್ದು 22 ಕಿಮೀ ನಷ್ಟು ಕಾಮಗಾರಿ ನಡೆದಿರುತ್ತದೆ.

ಆ) ತುಮಕೂರಿನ – ಶಿವಮೊಗ್ಗ ದವರೆಗೆ ಇನ್ನೂ 53.6 ಕಿಮೀ ನಷ್ಟು ಕೆಲಸ ಆಗಬೇಕಾಗಿದೆ.

ಇ) ತುಮಕೂರಿನಿಂದ – ಶಿವಮೊಗ್ಗದವರೆಗೆ ಇನ್ನೂ 53.6 ಕಿಮೀ ನಷ್ಟು ಕೆಲಸ ಆಗಬೇಕಾಗಿದೆ. ಇದರ ವಿವರ ಕೆಳಕಂಡಂತಿವೆ :

1) ಗುತ್ತಿಗೆ ಪ್ರಕ್ರಿಯೆಯಲ್ಲಿರುವ ಕಾಮಗಾರಿ – 12 ಕಿಮೀ

2) ಅನುಮೋದನೆಯಾಗಬೇಕಾಗಿರುವ ಕಾಮಗಾರಿ – 41.60 ಕಿಮೀ

ಈ ಕಾಮಗಾರಿಗಳಿಗೆ ಅಂದಾಜನ್ನು ತಯಾರಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಮಂಜೂರಾತಿಯನ್ನು ಪಡೆದು ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು. ವಿವರ ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕ್ರ ಸಂ	ವರ್ಷ	ಕಾಮಗಾರಿಯ ವಿವರ	ಷರಾ
1	2	3	4
1	2001–2002	ಕಿ.ಮೀ. 0.00 ರಿಂದ 10.00 ರವರೆಗೆ ರಸ್ತೆ ಗುಣಮಟ್ಟ ಅಭಿವೃದ್ಧಿಪಡಿಸುವುದು	ಪೂರ್ಣಗೊಂಡಿರುತ್ತದೆ.
2	2002–03	ಕಿ.ಮೀ. 10.00 ರಿಂದ 16.00 ರವರೆಗೆ ರಸ್ತೆ ಅಗಲಗೊಳಿಸುವುದು, ಮತ್ತು ಬಲಪಡಿಸುವುದು	ಪೂರ್ಣಗೊಂಡಿರುತ್ತದೆ.